
# ಕರ್ನಾಟಕದಲ್ಲಿ ಸ್ವಾಮಿ ವಿವೇಕಾನಂದರ ಪ್ರವಾಸ

ಎಮ್.ಆರ್. ನಾರಾಯಣಸ್ವಾಮಿ

ಅಜ್ಞಾತ ಸಂನ್ಯಾಸಿಯಾಗಿ ಭಾರತದ ಪರ್ಯಟನೆಯ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಕರ್ನಾಟಕಕ್ಕೆ ಬಂದಿದ್ದರು. ಈ ಸ್ವಾರಸ್ಯಕರ ಐತಿಹಾಸಿಕ ಘಟನೆಯೇ ಈ ಲೇಖನದ ವಸ್ತು. ನಿವೃತ್ತ ಶಿಕ್ಷಣಾಧಿಕಾರಿಗಳಾಗಿರುವ ಶ್ರೀ ನಾರಾಯಣಸ್ವಾಮಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವರು.




## ವಿವೇಕಾನಂದರು ಬೆಳಗಾಮಿನಲ್ಲಿ

ಸ್ವಾಮಿ ವಿವೇಕಾನಂದರು ೧೮೯೧ರ ಪ್ರಾರಂಭದಲ್ಲಿ ದೆಹಲಿಯಲ್ಲಿ ತಮ್ಮ ಸಂನ್ಯಾಸಿಭ್ರಾಯಿಗಳಿಗೆ ವಿದಾಯ ಹೇಳಿ ಏಕಾಂಗಿಯಾಗಿ ಭಾರತಯಾತ್ರೆ ಕೈಗೊಂಡರು. ಈ ಯಾತ್ರೆಯ ಕಾಲದಲ್ಲಿ ಒಬ್ಬ ಸಾಧಾರಣ ಸಂನ್ಯಾಸಿಯಾಗಿ ಪ್ರವಾಸ ಮಾಡಿದರು. ಸ್ವಾಮೀಜಿ ಉತ್ತರ ಭಾರತದಲ್ಲಿ ಪ್ರವಾಸ ಮುಗಿಸಿಕೊಂಡು ೧೮೯೨ರ ಅಕ್ಟೋಬರ್ ೧೫ರ ವೇಳೆಗೆ ಬೆಳಗಾಮ್ ನಗರಕ್ಕೆ ಬಂದರು. ಬರುವಾಗ ಕೊಲ್ಹಾಪುರದ ಮಹಾರಾಜರ ಆಪ್ತ ಕಾರ್ಯದರ್ಶಿ ಶ್ರೀ ಗೊಲ್ವಾಲ್ಕರ್ ಎಂಬವರಿಂದ ಬೆಳಗಾಮಿನ ಶ್ರೀ ಭಾಟೆ ಎಂಬವರಿಗೆ ಪರಿಚಯ ಪತ್ರ ತಂದಿದ್ದರು. ಬೆಳಗಾಮಿನಲ್ಲಿ ಅವರು ಶ್ರೀ ಭಾಟೆಯವರ ಮನೆಯಲ್ಲಿ ಬಿಡಾರ ಹೂಡಿದರು. ಶ್ರೀ ಭಾಟೆ ವಿದ್ವಾಂಸರು. ಅವರು ಸ್ವಾಮೀಜಿಯವರನ್ನು ಬಹು ವಿಶ್ವಾಸದಿಂದ ನೋಡಿಕೊಂಡರು.

ಶ್ರೀ ಭಾಟೆಯವರ ಪುತ್ರ ಪ್ರೊ.ಜಿ.ಎಸ್. ಭಾಟೆಯವರು ತಮ್ಮ ದಿನಚರಿಯಲ್ಲಿ ಸ್ವಾಮೀಜಿಯವರ ಬಗ್ಗೆ ಅನೇಕ ವಿಷಯಗಳನ್ನು ಬರೆದಿಟ್ಟಿದ್ದಾರೆ. ಅವರು ಸ್ವಾಮೀಜಿಯವರ ಅಪಾರ ವಿದ್ವತ್ತು, ಸಂಭಾಷಣಾ ಕೌಶಲ್ಯ, ಸರಳವಾದ ನಡವಳಿಕೆ ಇವುಗಳ ಬಗ್ಗೆ ತಮ್ಮ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಭಾಟೆಯವರು ಬೆಳಗಾಮ್ ನಗರದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದ ಪ್ರತಿಷ್ಠಿತ ವ್ಯಕ್ತಿಗಳನ್ನು ಆಹ್ವಾನಿಸಿ ಸ್ವಾಮೀಜಿಯವರೊಂದಿಗೆ ಹಲವಾರು ವಿಷಯಗಳ ಬಗ್ಗೆ ಪ್ರತಿದಿನ ಸಂಜೆ ಚರ್ಚೆ ನಡೆಸುತ್ತಿದ್ದರು. ಚರ್ಚೆಯ ಕಾಲದಲ್ಲಿ ಆಹ್ವಾನಿತರು ಸ್ವಾಮೀಜಿಯವರಿಗೆ ವಿವಿಧ ವಿಷಯಗಳಲ್ಲಿದ್ದ ಆಳವಾದ ಪಾಂಡಿತ್ಯವನ್ನೂ, ಯಾವಾಗಲೂ ಮಂದಸ್ಮಿತರಾಗಿ ಎಲ್ಲರೊಡನೆ ಮಾಡುತ್ತಿದ್ದ ಸರಸ ಸಂಭಾಷಣಾ ಕೌಶಲ್ಯವನ್ನೂ ಕಂಡು ತಮ್ಮ ತೃಪ್ತಿ ವ್ಯಕ್ತಪಡಿಸಿದ್ದಾರೆ.

ಇದೇ ಕಾಲಕ್ಕೆ ಬೆಳಗಾಮಿನಲ್ಲಿ ಸಬ್‌ಡಿವಿಷನಲ್ ಅರಣ್ಯಾಧಿಕಾರಿ ಶ್ರೀ ಹರಿಪದ ಮಿತ್ರ ಎಂಬುವರ ಪರಿಚಯವಾಯಿತು. ಅವರು ವಿದ್ವಾಂಸರು ಮತ್ತು ಉತ್ತಮ ಗೃಹಸ್ಥರು. ಶ್ರೀಯುತರು ಸ್ವಾಮೀಜಿಯವರ ಪ್ರೌಢಿಮೆ, ವಿನಯ, ಆಧ್ಯಾತ್ಮಿಕ ಸಂಪತ್ತುಗಳಿಗೆ ಮಾರುಹೋದರು. ಅವರು ಸ್ವಾಮೀಜಿಯವರನ್ನು ಕೆಲವು ದಿನಗಳ ಕಾಲ ತಮ್ಮ ಅತಿಥಿಯಾಗಬೇಕೆಂದು ಕೇಳಿಕೊಂಡರು. ಅದರಂತೆ ಸ್ವಾಮೀಜಿ ಶ್ರೀ ಭಾಟೆಯವರ ಅನುಮತಿ ಪಡೆದು ಶ್ರೀ ಹರಿಪದ ಮಿತ್ರ ಅವರಲ್ಲಿ ಒಂಬತ್ತು ದಿನಗಳ ಕಾಲ ಅತಿಥಿಯಾಗಿದ್ದರು. ಅಲ್ಲಿಯೂ ಪ್ರತಿದಿನ ಸಂಜೆ ವೇದಾಂತ, ಧರ್ಮ ಇವುಗಳ ಬಗ್ಗೆ ಸ್ವಾಮೀಜಿಯವರ ಪ್ರವಚನ ನಡೆಯುತ್ತಿತ್ತು. ಶ್ರೀ ಹರಿಪದ ಮಿತ್ರ ಅವರು ತಮ್ಮ ದಿನಚರಿಯಲ್ಲಿ ಸ್ವಾಮೀಜಿಯವರ ಬಗ್ಗೆ ಬರೆಯುತ್ತ ಅವರು ಅಸಾಧಾರಣ ವಿದ್ವಾಂಸರೆಂದೂ, ಅತಿ ಗಹನ ವಿಷಯಗಳನ್ನು ಸಹ ಎಲ್ಲರಿಗೂ ತಿಳಿಯುವಂತೆ ಸರಳವಾಗಿ ಸುಂದರವಾಗಿ ವಿವರಿಸುತ್ತಿದ್ದರೆಂದೂ ಅವರೊಬ್ಬ ಶ್ರೇಷ್ಠ ಗುರುಗಳೆಂದೂ ಬರೆದಿದ್ದಾರೆ.*

ಮತ್ತೊಂದು ಸಂದರ್ಭದಲ್ಲಿ ಸ್ವಾಮೀಜಿ ಶ್ರೀ ಹರಿಪದ ಮಿತ್ರ ಅವರೊಂದಿಗೆ ಮಾತನಾಡುತ್ತ ಹೀಗೆ ಹೇಳಿದರು: 'ಉತ್ತಮವಾಗಿ ಬದುಕಬೇಕು. ಯಾವಾಗಲೂ ಉನ್ನತ ಮಟ್ಟದ ವಿಷಯಗಳನ್ನು ಆಲೋಚಿಸಬೇಕು. ಯಾವಾಗಲೂ ಸಂತೋಷವಾಗಿರಬೇಕು. ದೇಹಕ್ಕೆ ದಣಿವುಂಟುಮಾಡುವ ಸುಖಭೋಗಗಳಲ್ಲಿ ಉದ್ಯುಕ್ತನಾಗಬಾರದು.' ಸಾವಿನ ಬಗ್ಗೆ ಮಾತನಾಡುತ್ತ ಹೀಗೆ ಹೇಳಿದರು: 'ನೀವು ಅಥವಾ ನಾವು ಮೃತ್ಯುವಶವಾದರೆ ಭೂಮಿಯ

---

*ಈಗ ಶ್ರೀ ಭಾಟೆಯವರ ಮನೆ ಸ್ವಾಮಿ ವಿವೇಕಾನಂದರ ಒಂದು ಸ್ಮಾರಕ ಭವನವಾಗಿದೆ ಹಾಗೂ ಶ್ರೀ ಹರಿಪದ ಮಿತ್ರರ ಮನೆಯನ್ನು ಇತ್ತೀಚೆಗೆ ಕರ್ನಾಟಕ ಸರ್ಕಾರವು ರಾಮಕೃಷ್ಣ ಮಹಾಸಂಘಕ್ಕೆ ಬಳುವಳಿಯಾಗಿ ನೀಡಿದೆ.

ಚಲನೆಯಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ನಾವು ಅತಿ ಮುಖ್ಯರೆಂಬ, ನಾವಿಲ್ಲದೆ ಯಾವುದೇ ಕಾರ್ಯ ನಡೆಯುವುದಿಲ್ಲ ವೆಂಬ ಭಾವನೆಯನ್ನು ಮೊದಲು ಬಿಡಬೇಕು.'

## ವಿವೇಕಾನಂದರು ಗೋವಾದಲ್ಲಿ

ಅಕ್ಟೋಬರ್ ೨೯ರಂದು ಸ್ವಾಮೀಜಿ ಗೋವಾಕ್ಕೆ ಹೊರಟರು. ಅಲ್ಲಿ ಆ ವೇಳೆಗಾಗಲೇ ಅವರ ಪ್ರತಿಭೆಯ ವಿಚಾರ ಎಲ್ಲರಿಗೂ ತಿಳಿದಿತ್ತು. ಅವರು ಮಾರ್ಗೋವಾ ರೈಲು ನಿಲ್ದಾಣದಲ್ಲಿ ಇಳಿದಾಗ ನೂರಾರು ಜನ ಅವರನ್ನು ಆದರದಿಂದ ಬರಮಾಡಿಕೊಂಡರು. ಕುದುರೆ ಸಾರೋಟಿನಲ್ಲಿ ಅವರನ್ನು ಮೆರವಣಿಗೆ ಯಲ್ಲಿ ಅವರ ಆತಿಥೇಯರಾದ ಶ್ರೀ ಸುಬ್ಬರಾಯ ನಾಯ್ಕರ ಮನೆಗೆ ಕರೆದೊಯ್ದರು. ಶ್ರೀ ಸುಬ್ಬರಾಯ ನಾಯ್ಕರು ಆ ಪ್ರಾಂತದಲ್ಲಿ ವಿದ್ವಾಂಸ ರೆಂದೂ, ಸಂಭಾವಿತರೆಂದೂ ಹೆಸರುವಾಸಿ ಯಾಗಿದ್ದರು. ಸ್ವಾಮೀಜಿಯವರ ಮಹತ್ತರವಾದ ಪಾಂಡಿತ್ಯ ಮತ್ತು ಸದ್ಗುಣಗಳಿಗೆ ಮಾರು ಹೋದರು. ಸ್ವಾಮೀಜಿಯವರನ್ನು ಅವರು ಶ್ರೀ ಆಳ್ವಾರಿಸ್ ಎಂಬ ಕ್ರೈಸ್ತ ವಿದ್ವಾಂಸರಿಗೆ ಪರಿಚಯಿಸಿದರು. ಶ್ರೀ ಆಳ್ವಾರಿಸ್ ಸ್ವಾಮೀಜಿಯವರು ಕ್ರೈಸ್ತಧರ್ಮದ ಬಗ್ಗೆ ಹೊಂದಿದ್ದ ಅಪಾರ ತಿಳುವಳಿಕೆಯನ್ನು ಮೆಚ್ಚಿ ಕೊಂಡರು. ಅವರಿಗೆ ರಾಕೋಟ್ ಸೆಮಿನರಿಯಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿ ಕೊಟ್ಟರು. ಸ್ವಾಮೀಜಿ ಯವರು ಅಲ್ಲಿ ಮೂರು ದಿನಗಳ ಕಾಲ ತಂಗಿದ್ದರು. ಅಲ್ಲಿಯ ಕ್ರೈಸ್ತ ಮತದ ಧರ್ಮಗ್ರಂಥಗಳನ್ನು ಪರಿಶೀಲಿಸಿದರು. ಫಾದರ್ ಡೂಪೆನ್, ಇತರ ಪಾದ್ರಿಗಳು ಮತ್ತು ಅಲ್ಲಿಯ ವಿದ್ಯಾರ್ಥಿಗಳು, ಸ್ವಾಮೀಜಿಯವರನ್ನು ಕ್ರೈಸ್ತ ವಿದ್ವಾಂಸರಿಗೆ ಪರಿಚಯ ಮಾಡಿಸಿದರು. ಶ್ರೀ ಆಳ್ವಾರಿಸ್ ಅವರು ಸ್ವಾಮೀಜಿ ಕ್ರೈಸ್ತಧರ್ಮದ ಬಗ್ಗೆ ನೀಡಿದ ವ್ಯಾಖ್ಯಾನಗಳನ್ನು ಕೇಳಿ ವಿಸ್ಮಿತ ರಾದರು. ಗೋವಾದಲ್ಲಿ ಸ್ವಾಮೀಜಿ ಪಣಜಿ ಮತ್ತು ಅನೇಕ ಹಳ್ಳಿ ಗಳಲ್ಲಿ ಸಂಚರಿಸಿದರು. ಅಲ್ಲಿಯ ಸುಂದರವಾದ ದೇವಾಲಯ ಗಳನ್ನು ವೀಕ್ಷಿಸಿದರು. ಗೋವಾದ ಬಗ್ಗೆ ಸ್ವಾಮೀಜಿ ತಮ್ಮ ಅಭಿಪ್ರಾಯಗಳನ್ನು ಈ ರೀತಿ ತಿಳಿಸಿದರು : 'ಪಣಜಿ ಸುಂದರ ನಗರ, ಚೊಕ್ಕಟವಾದ ನಗರ. ಇಲ್ಲಿಯ ಕ್ರೈಸ್ತರು ಓದು ಬರಹ ಬಲ್ಲವರು. ಇಲ್ಲಿಯ ಹಿಂದುಗಳು ಅವಿದ್ಯಾವಂತರು....'



ಸಚ್ಚಿದ್ಯಾ ಪಾಠಶಾಲೆಯಲ್ಲಿರುವ ಫಲಕ

ಗೋವಾದಿಂದ ಸ್ವಾಮೀಜಿ ಧಾರವಾಡಕ್ಕೆ ರೈಲಿನಲ್ಲಿ ಪಯಣಿ ಸಿದರು. ಅಲ್ಲಿಂದ ನೇರವಾಗಿ ಬೆಂಗಳೂರು ತಲುಪಿದರು. ಬೆಂಗಳೂರಿನಲ್ಲಿ ಅವರು ಡಾ. ಪಾಲ್ಪು ಎಂಬುವರಲ್ಲಿ ಅತಿಥಿ ಯಾಗಿ ಉಳಿದಿದ್ದರು. ಕೇರಳದವರಾದ ಇವರು ಬೆಂಗಳೂರಿನ ಮುನಿಸಿಪಲ್ ವೈದ್ಯಾಧಿಕಾರಿಯಾಗಿದ್ದರು. ಎಜಿನ ಪಂಗಡಕ್ಕೆ ಸೇರಿ ದವರು. ಅವರು ಉಚ್ಚ ವರ್ಗದ ಜನರಿಂದ ಹೀನಾಯಕ್ಕೆ ಗುರಿ ಯಾಗಿ ತಿರುವಾಂಕೂರಿನಲ್ಲಿ ಕೆಲಸ ಸಿಗದೆ ಬೆಂಗಳೂರಿಗೆ ಬಂದು ನೆಲಸಿದ್ದರು.

ಬೆಂಗಳೂರಿಗೆ ಬಂದ ಸ್ವಲ್ಪ ಸಮಯದಲ್ಲೇ ಸ್ವಾಮೀಜಿ ಯವರಿಗೆ ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀ ಕೆ. ಶೇಷಾದ್ರಿ ಅಯ್ಯರ್ ಅವರ ಪರಿಚಯವಾಯಿತು. ದಿವಾನರಿಗೆ



ಸದ್ವಿದ್ಯಾ ಪಾಠಶಾಲ : ಸ್ವಾಮಿ ವಿವೇಕಾನಂದರು ಉಪನ್ಯಾಸ ನೀಡಿದ ಸ್ಥಳ

ಸ್ವಾಮೀಜಿಯವರ ವಿದ್ವತ್ತು, ಪ್ರತಿಭೆ ಸದ್ಗುಣಗಳು ಬಹಳ ಮೆಚ್ಚುಗೆಯಾದವು. ಸ್ವಾಮೀಜಿ ಮೈಸೂರಿಗೆ ಬಂದಾಗ ದಿವಾನರ ಅತಿಥಿಯಾಗಿ ಉಳಿದರು. ಮೈಸೂರಿನಲ್ಲಿ ಸ್ವಾಮೀಜಿ ಅನೇಕ ಅಧಿಕಾರಿಗಳನ್ನೂ ಶ್ರೀಮಂತರನ್ನೂ ಕಂಡರು. ಮೈಸೂರು ನಗರದಲ್ಲಿ ಅವರು ಈಗಿನ ಸದ್ವಿದ್ಯಾ ಪಾಠಶಾಲೆಯ ಸಭಾಂಗಣದಲ್ಲಿ ಭಾಷಣ ಪ್ರವಚನ-ವ್ಯಾಖ್ಯಾನಗಳನ್ನು ಮಾಡಿದ ರೆಂದು ತಿಳಿದುಬರುತ್ತದೆ. ಮೈಸೂರಿನಲ್ಲಿ ಹಿಂದೂಗಳೇ ಅಲ್ಲದೆ ಇತರ ಧರ್ಮಗಳ ಅನುಯಾಯಿಗಳೂ ಸ್ವಾಮೀಜಿಯವರ ಭಾಷಣಗಳಿಂದ ಪ್ರಭಾವಿತರಾಗಿದ್ದರು. ಆಗಿನ ಕೌನ್ಸಿಲರ್ ಆಗಿದ್ದ ಶ್ರೀ ಅಬ್ದುಲ್ ರಹಮಾನ್ ಸಾಹೇಬ್ ಎಂಬವರು ಸ್ವಾಮೀಜಿ ಖುರಾನ್ ಬಗ್ಗೆ ನೀಡಿದ ವ್ಯಾಖ್ಯಾನವನ್ನು ಬಹಳವಾಗಿ ಮೆಚ್ಚಿ ಕೊಂಡರು. ಖುರಾನ್ ಬಗ್ಗೆ ತಮಗಿದ್ದ ಅನೇಕ ಸಂಶಯಗಳನ್ನು ಪರಿಹರಿಸಿಕೊಂಡರು.

## ಮೈಸೂರಿನಲ್ಲಿ ರಾಜರ ಅತಿಥಿಯಾಗಿ

ಸ್ವಾಮೀಜಿಯವರ ಬಗ್ಗೆ ದಿವಾನರಿಗೆ ಅಪಾರ ಗೌರವ ಉಂಟಾಯಿತು. ಅವರು ಸ್ವಾಮೀಜಿಯವರನ್ನು ಮೈಸೂರು ಸಂಸ್ಥಾನದ ಆಗಿನ ಮಹಾರಾಜ ಶ್ರೀ ಚಾಮರಾಜ ಒಡೆಯರ್ ಅವರಿಗೆ ಪರಿಚಯ ಮಾಡಿಕೊಟ್ಟರು. ಮಹಾರಾಜರು ಸ್ವಾಮೀಜಿ ಯವರ ಆಳವಾದ ವಿದ್ವತ್ತನ್ನೂ ದಿವ್ಯ ತೇಜಸ್ಸಿನ ವ್ಯಕ್ತಿತ್ವವನ್ನೂ ಕಂಡು ಬೆರಗಾದರು. ಮಹಾರಾಜರು ಅವರನ್ನು ಅರಮನೆಯಲ್ಲಿ ತಮ್ಮ ಅತಿಥಿಯಾಗಿರಬೇಕೆಂದು ಬಿನ್ನವಿಸಿಕೊಂಡರು. ಸ್ವಾಮೀಜಿ ಯವರು ಅರಮನೆಯಲ್ಲಿ ಅನೇಕ ದಿನ ರಾಜಾತಿಥ್ಯ ಪಡೆದರು. ಮಹಾರಾಜರು ಪ್ರತಿದಿನ ಸ್ವಾಮೀಜಿಯವರೊಂದಿಗೆ ಅನೇಕ ಗಹನ ವಿಷಯಗಳನ್ನು ಚರ್ಚಿಸುತ್ತಿದ್ದರು. ಮಹಾರಾಜರು ಅನೇಕ

ವಿಷಯಗಳಲ್ಲಿ ಸ್ವಾಮೀಜಿಯವರ ಸಲಹೆ ಪಡೆಯುತ್ತಿದ್ದರು.

ಒಮ್ಮೆ ಮಹಾರಾಜರು ಸ್ವಾಮೀಜಿಯವರನ್ನು ತಮ್ಮ ದರ್ಬಾರಿಗಳ ಬಗ್ಗೆ ಅವರ ಎದುರೇ ಅಭಿಪ್ರಾಯ ಕೇಳಿದರು. ಸ್ವಾಮೀಜಿ ಸಂಕೋಚವಿಲ್ಲದೆ ಹೇಳಿದರು: 'ಮಹಾಸ್ವಾಮಿಯವರೇ, ನೀವೇನೋ ಬಹಳ ವಿಶಾಲ ಹೃದಯವುಳ್ಳವರಾಗಿದ್ದೀರಿ. ಆದರೆ ನಿಮ್ಮ ಸುತ್ತಲೂ ಈ ದರ್ಬಾರಿಗಳು ಮುತ್ತಿಕೊಂಡಿದ್ದಾರೆ. ದರ್ಬಾರಿಗಳು ಎಲ್ಲಿ ಹೋದರೂ ದರ್ಬಾರಿಗಳೇ.' ಮಹಾರಾಜರು ಅದು ಹಾಗಲ್ಲವೆಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅನಂತರ ಅವರು ತಮ್ಮ ದಿವಾನರು ಬುದ್ಧಿವಂತರೆಂದೂ ನಂಬಿಕೆಗೆ ಪಾತ್ರರೆಂದೂ ಹೇಳಿ ಅವರ ಬಗ್ಗೆ ಸ್ವಾಮೀಜಿಯವರ ಅಭಿಪ್ರಾಯ ಕೇಳಿದರು. ಸ್ವಾಮೀಜಿ ನಕ್ಕು, 'ದಿವಾನರು ರಾಜರನ್ನು ದೋಚಿ ಪೊಲಿಟಿಕಲ್ ಏಜಂಟರಿಗೆ ಹಣಕೊಡುತ್ತಾರೆ'ಎಂದು ಹೇಳಿದರು. ಈಗಲೂ ಮಹಾರಾಜರಿಗೆ ಈ ಅಭಿಪ್ರಾಯ ಸರಿ ಕಾಣಲಿಲ್ಲ. ಅನಂತರ ಮಹಾರಾಜರು ಸ್ವಾಮೀಜಿಯವರನ್ನು ತಮ್ಮ ಸ್ವಂತ ಕೊಠಡಿಗೆ ಬರಮಾಡಿಕೊಂಡು 'ತಾವು ಅಷ್ಟು ನಿಷ್ಠುರವಾಗಿ ಮಾತನಾಡಬಾರದು. ತಾವು ಹೀಗೆಯೇ ಮಾತನಾಡಿದರೆ ಯಾರಾದರೂ ಅಸಮಾಧಾನದಿಂದ ವಿಷಪ್ರಾಶನಕ್ಕೆ ಪ್ರಯತ್ನಿಸಬಹುದು' ಎಂದು ಎಚ್ಚರಿಸಿದರು. ಅದಕ್ಕೆ ಸ್ವಾಮೀಜಿಯವರು 'ಸತ್ಯನಿಷ್ಠನಾದ ಸಂನ್ಯಾಸಿ ಸತ್ಯ ಹೇಳಲು ಹೆದರುವುದಿಲ್ಲ' ಎಂದರು. 'ಮಹಾಸ್ವಾಮಿ! ನಾಳೆ ನಿಮ್ಮ ಮಗ ನನ್ನ ಬಳಿ ಬಂದು ನಿಮ್ಮ ಬಗ್ಗೆ ನನ್ನ ಅಭಿಪ್ರಾಯ ವೇನೆಂದು ಕೇಳಿದರೆ ನಿಮ್ಮಲ್ಲಿ ನಾನು ಕಾಣದ ಸದ್ಗುಣಗಳು ಇವೆಯೆಂದು ಹೇಳಲಾಗುತ್ತದೆಯೆ? ನಾನು ಸುಳ್ಳಾಡಲೇ? ಅದು ಎಂದಿಗೂ ಸಾಧ್ಯವಿಲ್ಲ' ಎಂದರು.

> **ಯಾರು ಇತರರಿಗಾಗಿ ಬಾಳುತ್ತಾರೋ ಅವರೇ ನಿಜವಾಗಿ ಬದುಕಿರುತ್ತಾರೆ. ಇತರರು ಬದುಕಿದ್ದೂ ಸತ್ತಂತೆ**

ಸ್ವಾಮೀಜಿಯವರು
ಮೈಸೂರು ಮಹಾರಾಜರಿಗೆ ಬರೆದ ಪತ್ರದಿಂದ.

### ಅಸಾಧ್ಯ ಪ್ರತಿಭೆ

ಈ ಪ್ರಕರಣ ಅಲ್ಲಿಗೇ ಮುಗಿಯಿತು. ಅರಮನೆಯಲ್ಲಿದ್ದಾಗ ಒಮ್ಮೆ ಅವರಿಗೆ ಆಸ್ಟ್ರಿಯಾದ ಪ್ರಸಿದ್ಧ ಸಂಗೀತಗಾರನೊಬ್ಬನ ಪರಿಚಯವಾಯಿತು. ಸ್ವಾಮೀಜಿ ಅವನೊಂದಿಗೆ ಪಾಶ್ಚಾತ್ಯ ಸಂಗೀತದ ಬಗ್ಗೆ ನಿರರ್ಗಳವಾಗಿ, ಕರಾರುವಾಕ್ಕಾಗಿ ಮಾತನಾಡಿದ್ದನ್ನು ಕೇಳಿ ಅಲ್ಲಿದ್ದ ಇತರ ಸಂಗೀತ ವಿದ್ವಾಂಸರಿಗೆ ಆ ಸಂಗೀತದ ಬಗ್ಗೆ ಸ್ವಾಮೀಜಿಯವರಿಗೆ ಇದ್ದ ಪರಿಶ್ರಮ ವಿಸ್ಮಯ ಉಂಟು ಮಾಡಿತು. ಸ್ವಾಮೀಜಿಯವರು ಮೈಸೂರಿನ ಅರಮನೆಯಲ್ಲಿ ತಂಗಿದ್ದಾಗ ಒಂದು ದಿನ ವಿದ್ಯುತ್ ಕೆಲಸಗಾರನೊಬ್ಬ ಅರಮನೆಯಲ್ಲಿ ವಿದ್ಯುತ್ ಸರಬರಾಜಿಗೆ ತಕ್ಕ ಸಲಕರಣೆಗಳನ್ನು ಜೋಡಿಸುತ್ತಿದ್ದ. ಆ ಕೆಲಸಗಾರನೊಂದಿಗೆ ಸ್ವಾಮೀಜಿ ವಿದ್ಯುತ್ತಿನ ಬಗ್ಗೆ ಮಾತನಾಡುತ್ತಿದ್ದಾಗ ಆ ಕೆಲಸಗಾರನಿಗಿಂತ ಅವರಿಗೇ ಹೆಚ್ಚು ವಿಷಯಗಳು ತಿಳಿದಿದ್ದುವೆಂಬುದು ವ್ಯಕ್ತವಾಯಿತು.

ಒಮ್ಮೆ ಬೆಂಗಳೂರಿನಲ್ಲಿ ಸ್ವಾಮೀಜಿ ದಿವಾನರ ಅತಿಥಿಯಾಗಿದ್ದಾಗ ದಿವಾನರು ಪಂಡಿತೋತ್ತಮರ ಸಭೆಯನ್ನು ಬೆಂಗಳೂರಿನ ಅರಮನೆಯಲ್ಲಿ ಏರ್ಪಡಿಸಿದರು. ದಿವಾನರೇ ಆ ಸಭೆಗೆ ಅಧ್ಯಕ್ಷರಾಗಿದ್ದರು. ವೇದಾಂತದ ಬಗ್ಗೆ ಚರ್ಚೆ ನಡೆಯಿತು. ಸಭೆಗೆ ಆಗಮಿಸಿದ್ದ ಪಂಡಿತರು ತಮ್ಮ ವಿದ್ವತ್ಪೂರ್ಣ ವಾದಗಳನ್ನು ಮಂಡಿಸಿದರು. ಸ್ವಾಮೀಜಿ ಕೊನೆಯಲ್ಲಿ ಮಾತನಾಡಿ ವೇದಾಂತದ ಬಗ್ಗೆ ತಮ್ಮ ವಾದ ಮಂಡಿಸಿದರು. ಸಭಾಸದಸ್ಯರು ಸ್ವಾಮೀಜಿಯವರ ಅಸಾಧಾರಣ ಪಾಂಡಿತ್ಯವನ್ನೂ, ವಾದಸರಣಿಯನ್ನೂ ಕೇಳಿ ತಮ್ಮ ಅತೀವ ಸಂತೋಷವನ್ನೂ ಆಶ್ಚರ್ಯವನ್ನೂ ವ್ಯಕ್ತಪಡಿಸಿದರು.

### ನಿಜವಾದ ಸಂನ್ಯಾಸಿ

ಸ್ವಾಮೀಜಿ ಬಗ್ಗೆ ಅತೀವ ಅಭಿಮಾನ ಮತ್ತು ಗೌರವ ಹೊಂದಿದ್ದ ದಿವಾನರು ಒಂದು ದಿನ ಅವರೊಂದಿಗೆ ಮಾತನಾಡುತ್ತಿದ್ದಾಗ ಸ್ವಾಮೀಜಿಯವರಿಗೆ ಹಲವು ಬಹುಮಾನಗಳನ್ನು ಕೊಡಬೇಕೆಂಬ ಆಶಯ ವ್ಯಕ್ತಪಡಿಸಿ, ಅದಕ್ಕಾಗಿ ತಮ್ಮ ಕಾರ್ಯದರ್ಶಿಯವರನ್ನು ಕರೆದು ಸ್ವಾಮೀಜಿಯವರನ್ನು ಬೆಂಗಳೂರಿನ ಪ್ರತಿಷ್ಠಿತ ಅಂಗಡಿಗೆ ಕರೆದೊಯ್ದು ಅವರು ಅಪೇಕ್ಷಿಪಡುವ ಯಾವುದೇ ವಸ್ತುವನ್ನು ಅದಕ್ಕಾಗಿ ಸಾವಿರ ರೂಪಾಯಿಗಳಾದರೂ ಯೋಚಿಸದೆ ತೆಗೆದುಕೊಡಬೇಕೆಂದು ಆದೇಶವಿತ್ತರು. ದಿವಾನರನ್ನು ತೃಪ್ತಿಗೊಳಿಸುವ ಇಚ್ಛೆಯಿಂದ ಸ್ವಾಮೀಜಿ ಕಾರ್ಯದರ್ಶಿಯೊಂದಿಗೆ ನಗರದ ಪ್ರತಿಷ್ಠಿತ ಅಂಗಡಿಯೊಂದಕ್ಕೆ ಹೋಗಿ ಅಲ್ಲಿದ್ದ ಅನೇಕ ಸುಂದರ ಕರಕುಶಲ ವಸ್ತುಗಳನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಕಾರ್ಯದರ್ಶಿಯವರು ಸ್ವಾಮೀಜಿಯು ಯಾವುದಾದರೂ ಸುಂದರವಾದ ಬೆಲೆ ಬಾಳುವ ವಸ್ತುವನ್ನು ಅಪೇಕ್ಷಿಪಡಬಹುದೆಂದು ಎಣಿಸುತ್ತಿದ್ದರು. ಸ್ವಾಮೀಜಿ ಕಾರ್ಯದರ್ಶಿಯವರನ್ನು ಕುರಿತು ಹೇಳಿದರು: 'ನೋಡಿ ಗೆಳೆಯರೇ, ದಿವಾನರು ಯಾವುದೇ ವಸ್ತುವನ್ನಾದರೂ ಆರಿಸಿ ತೆಗೆದುಕೊಳ್ಳಬಹುದೆಂದು ಅಪೇಕ್ಷೆಪಟ್ಟಿದ್ದಾರೆ. ಆದುದರಿಂದ ಇಲ್ಲಿ ಸಿಗುವ ಉತ್ತಮ ದರ್ಜೆಯ ಚುಟ್ಟವೊಂದನ್ನು ನನಗೆ ಕೊಡಿಸಿ.' ಒಂದು ರೂಪಾಯಿ ಬೆಲೆಬಾಳುವ ಒಂದು ಚುಟ್ಟ ಕೊಂಡು ಅತ್ಯಂತ ಸಂತೋಷದಿಂದ ದಿವಾನರ ಬಂಗಲೆಗೆ ಹಿಂದಿರುಗಿದರು.

ಒಂದು ದಿನ ಮಹಾರಾಜರು ಸ್ವಾಮೀಜಿಯವರನ್ನು ತಮ್ಮ ಕೊಠಡಿಗೆ ಬರಮಾಡಿಕೊಂಡರು. ಆ ಸಮಯದಲ್ಲಿ ದಿವಾನ್ ಶ್ರೀ ಕೆ. ಶೇಷಾದ್ರಿ ಅಯ್ಯರ್ ಅವರೂ ಅಲ್ಲಿಯೇ ಇದ್ದರು. ಮಹಾರಾಜರು ಸ್ವಾಮೀಜಿಯವರನ್ನು ಕುರಿತು 'ನಾವು ನಿಮಗೆ ಹೇಗೆ ಸಹಾಯ ಮಾಡಬಲ್ಲೆವು?' ಎಂದು ಕೇಳಿದರು. ಸ್ವಾಮೀಜಿ

ನೇರವಾಗಿ ಉತ್ತರಿಸದೆ ತಾವು ಮುಂದೆ ಕೈಗೊಳ್ಳಬೇಕೆಂದಿರುವ ಅಮೆರಿಕ ಪ್ರವಾಸದ ಬಗ್ಗೆ ತಿಳಿಸಿದರು. ಭಾರತದ ಬಗ್ಗೆ, ಭಾರತದ ಸಂಸ್ಕೃತಿಯ ಬಗ್ಗೆ, ಭಾರತದ ವೇದಾಂತ ಮತ್ತು ಅಧ್ಯಾತ್ಮ ಶಕ್ತಿಯ ಬಗ್ಗೆ, ಭಾರತೀಯರ ಬಗ್ಗೆ ಮತ್ತು ಭಾರತಕ್ಕೆ ಅವಶ್ಯವಿರುವ ಪಾಶ್ಚಾತ್ಯ ವೈಜ್ಞಾನಿಕ ಜ್ಞಾನದ ಬಗ್ಗೆ, ಕೈಗಾರಿಕಾ ಪ್ರಗತಿಯ ಬಗ್ಗೆ, ವಿದ್ವತ್ಪೂರ್ಣವಾಗಿ ಮಾತನಾಡಿದರು. ಅವರು ಮುಂದುವರಿದು ಪಾಶ್ಚಾತ್ಯರಿಂದ ಭಾರತೀಯರು ವ್ಯವಸಾಯ, ಕೈಗಾರಿಕೆ ಮತ್ತು ಇತರ ಜ್ಞಾನದ ಬಗ್ಗೆ ಅವಶ್ಯವಾದ ವಿವರಗಳನ್ನು ದೊರಕಿಸಿಕೊಳ್ಳಬೇಕೆಂಬ, ಇದರಿಂದ ಭಾರತೀಯರು ಉತ್ತಮವಾದ ಜೀವನ ನಡೆಸುವಂತಾಗಬೇಕೆಂಬ ತಮ್ಮ ಅಭಿಪ್ರಾಯ ತಿಳಿಸಿದರು.

ಮಹಾರಾಜರು ಸ್ವಾಮೀಜಿಯವರ ಅಮೆರಿಕ ಪ್ರವಾಸಕ್ಕೆ ಬೇಕಾದ ಹಣಸಹಾಯ ನೀಡುವುದಾಗಿ ಭರವಸೆ ನೀಡಿದರು. ಆದರೆ ಸ್ವಾಮೀಜಿ ಆ ಕೂಡಲೇ ಹಣವನ್ನು ಸ್ವೀಕರಿಸಲು ಒಪ್ಪಲಿಲ್ಲ.

ಕೆಲವು ದಿನ ಕಳೆದಮೇಲೆ ಸ್ವಾಮೀಜಿ ತಾವು ಮುಂದಿನ ಪ್ರವಾಸ ಕೈಗೊಳ್ಳುವುದಾಗಿ ತಿಳಿಸಿದರು. ಮಹಾರಾಜರು ಅದಕ್ಕೆ ಸಮ್ಮತಿಸದೆ ಇನ್ನೂ ಕೆಲವು ಕಾಲ ತಮ್ಮ ಜೊತೆಯಲ್ಲೇ ಇರಬೇಕೆಂದು ಅಪೇಕ್ಷಿಸಿದರು. ಸ್ವಾಮೀಜಿ ಇದಕ್ಕೆ ಒಪ್ಪದೆ ಪ್ರಯಾಣಕ್ಕೆ ಸನ್ನದ್ಧರಾದರು. ಮಹಾರಾಜರು ಸ್ವಾಮೀಜಿಗೆ ಬೆಲೆಬಾಳುವ ವಸ್ತುವನ್ನು ಬಹುಮಾನವಾಗಿ ಕೊಡಲು ಬಯಸಿದರು. ಸ್ವಾಮೀಜಿ ಒಂದು ಹುಕ್ಕಾವನ್ನು ಮಾತ್ರ ಸ್ವೀಕರಿಸಿದರು. ಅದರ ಜೊತೆಗೆ ಕರಿಮರದಲ್ಲಿ ಸುಂದರವಾಗಿ ಕೆತ್ತನೆ ಮಾಡಿದ್ದ ನಳಿಗೆಯನ್ನೂ ತೆಗೆದುಕೊಂಡರು. ಮಹಾರಾಜರು ಸ್ವಾಮೀಜಿಯವರ ನೆನಪಿಗಾಗಿ



ಸ್ವಾಮೀಜಿ ಮೈಸೂರಿಗೆ ಬಂದಿದ್ದಾಗ ಉಳಿದುಕೊಂಡಿದ್ದ ಹಳೆಯ ಅರಮನೆ

ಸ್ವಾಮೀಜಿಯ ಸಂದೇಶವನ್ನು ಧ್ವನಿಮುದ್ರಣ ಮಾಡಿಕೊಂಡರು ಎಂದು ಕರ್ಣಾಕರ್ಣಿಯಾಗಿ ತಿಳಿದುಬಂದಿದೆ. ಆದರೆ ದುರದೃಷ್ಟವಶಾತ್ ಆ ಧ್ವನಿಮುದ್ರಿಕೆ ಸಿಕ್ಕಿಲ್ಲ. ಸ್ವಾಮೀಜಿ ಹೊರಡುವ ದಿನ ಬಂದಿತು. ಅವರು ಹೊರಟು ನಿಂತಾಗ ಮಹಾರಾಜರು ಅವರಿಗೆ ಪಾದಮುಟ್ಟಿ ನಮಸ್ಕರಿಸಿದರು. ದಿವಾನರು ಸ್ವಾಮೀಜಿಯವರ ಜೇಬಿಗೆ ಹಣದ ಕಂತೆ ತುರುಕಲು ಪ್ರಯತ್ನಿಸಿದರು. ಸ್ವಾಮೀಜಿ ಅದಕ್ಕೆ ಸಮ್ಮತಿಸಲಿಲ್ಲ. ಆದರೆ ತಾವು ಹೋಗಬೇಕೆಂದಿದ್ದ ಸ್ಥಳಕ್ಕೆ ಟಿಕೆಟ್ ತರಿಸಿಕೊಡುವಂತೆ ತಿಳಿಸಿದರು. ಸ್ವಾಮೀಜಿ ತಮ್ಮ ಪ್ರವಾಸ ಮುಂದುವರಿಸಿದರು. ಶ್ರೀ ಕೆ.ಶೇಷಾದ್ರಿ ಅಯ್ಯರ್‌ರವರು ಕೊಟ್ಟ ಸಂಸ್ಥಾನದ ದಿವಾನರಿಗೆ ಪರಿಚಯ ಪತ್ರವನ್ನು ಇತ್ತರು. ಇದರೊಂದಿಗೆ ಸ್ವಾಮೀಜಿಯವರ ಕರ್ನಾಟಕದ ಪ್ರವಾಸ ಕೊನೆಗೊಂಡಿತು. ❖

## ಪ್ರಹಸನ ಪ್ರಸಂಗ

ನಾವು ಇತರರನ್ನು ಅಪಹಾಸ್ಯ ಮಾಡಲು ಹೋದರೆ ನಾವೇ ಎಷ್ಟೋ ವೇಳೆ ಅಪಹಾಸ್ಯಕ್ಕೆ ಒಳಗಾಗುತ್ತೇವೆ. ನಾವು ಅಪಹಾಸ್ಯಕ್ಕೆ ಒಳಗಾದಾಗ ನಮ್ಮ ಅಹಂಕಾರಕ್ಕೆ ಹೇಗೆ ನೋವುಂಟಾಗುವುದೋ ಹಾಗೆಯೆ ಇತರರಿಗೂ ಕೂಡ ಎಂಬ ತಿಳಿವು ನಮಗಿರಬೇಕು.

ಪಶುವೈದ್ಯನೊಬ್ಬನು ತನ್ನ ವೃತ್ತಿಯನ್ನು ತ್ಯಜಿಸಿ ರಾಜಕೀಯವನ್ನು ಪ್ರವೇಶಿಸಿದ. ಹೇಗೋ ಪಾರ್ಲಿಮೆಂಟಿಗೆ ಚುನಾಯಿತನಾಗಿ ಹೋದನು.

ಒಮ್ಮೆ ಪಾರ್ಲಿಮೆಂಟ್ ಸಭೆ ಸೇರಿರುವಾಗ ಇವನಿಗೂ ಇನ್ನೋರ್ವ ಸದಸ್ಯನಿಗೂ ವಾಗ್ಯುದ್ಧ ಶುರುವಾಯಿತು. ಆ ಸಂದರ್ಭದಲ್ಲಿ ಈ ಪಶುವೈದ್ಯನನ್ನು ಅವನು ತುಂಬ ತಿರಸ್ಕಾರದ ಧ್ವನಿಯಲ್ಲಿ,

'ನೀವು "ಪಶು"ವೈದ್ಯರಾಗಿದ್ದಿರಲ್ಲವೆ?' ಎಂದು ಕೇಳಿದನು.

'ಹೌದು, ನಿಮಗೇನಾದರೂ ಕಾಯಿಲೆಯಾಗಿದೆಯೆ?' ಎಂದು ಕೇಳಿದನು ಪಶುವೈದ್ಯ.

ಕೆಲವರಿಗೆ ಸೇವೆ ಮಾಡುವ ಹುಮ್ಮಸ್ಸು, ತಮ್ಮ ಒಳಿತನ್ನು ಕಡೆಗಣಿಸಿ ಇತರರ ಒಳಿತನ್ನು ಸಾಧಿಸುವ ಉತ್ಸಾಹ. ಇಲ್ಲಿ ಇತರರ ಮೇಲೆ ಕಳಕಳಿಗಿಂತ ತಮ್ಮ ಚಪಲವನ್ನು ತೀರಿಸುವ ಹಂಬಲವೇ ಅಧಿಕವಾಗಿರುತ್ತದೆ. ಇಂತಹ ಸೇವೆಯಿಂದ ಅನೇಕ ವೇಳೆ ಸೇವೆ ಮಾಡಿಸಿಕೊಂಡವರಿಗೆ ಹೆಚ್ಚು ಅನಾನುಕೂಲವೇ ಆಗುತ್ತದೆ.

ಒಂದು ಮಂಗ ಇತ್ತು. ಅದು ಒಂದು ನದಿಯ ದಡದಲ್ಲಿ ಕುಳಿತುಕೊಂಡಿತ್ತು. ನೀರಿನಲ್ಲಿ ಕಂಡ ಮೀನುಗಳ ದೃಶ್ಯ ಅದರಲ್ಲಿ ಸೇವಾ ಮನೋಭಾವವನ್ನು ಕೆರಳಿಸಿತು. ಅದು ಒಂದೊಂದೇ ಮೀನನ್ನು ತೆಗೆದು ಮರದಮೇಲೆ ಬಿಡತೊಡಗಿತು.

ಯಾರೋ ಮಂಗನನ್ನು ಕೇಳಿದರು, 'ಏನು ಮಾಡುತ್ತಿರುವೆ?' ಎಂದು.

'ಸೇವೆ ಮಾಡುತ್ತಿರುವೆ.'

'ಇದೆಂತಹ ಸೇವೆಯೊ, ಮಂಗ!'

'ಪಾಪ, ಈ ಮೀನುಗಳು ನೀರಿನಲ್ಲಿ ಮುಳುಗಿ ಪರದಾಡುತ್ತಿವೆ. ಅವುಗಳನ್ನು ನೀರಿನಿಂದ ರಕ್ಷಿಸಿ ಮರದ ಮೇಲೆ ಬಿಡುತ್ತಿದ್ದೇನೆ.'

'ಒಬ್ಬನ ಅಮೃತ ಇನ್ನೋರ್ವನ ವಿಷವಾಗಬಲ್ಲದು.'